**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10006/2023**

ಪಿಡಬ್ಲೂ- 5

ಸಿಡಬ್ಲೂ- 5

| | |
|---|---|
| ಸಾಕ್ಷಿ ಹೆಸರು | - ಕನ್ನಪ್ಪ |
| ತಂದೆ ಹೆಸರು | - ಬಸವಣ್ಯಪ್ಪ |
| ವಯಸ್ಸು | - 55 ವರ್ಷ |
| ಉದ್ಯೋಗ | - ಕೂಲಿ |
| ವಾಸಃ | - ಯಲಸಿ , ಸೊರಬ ತಾಲ್ಲೂಕು |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 18-07-2025.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಚಾಸಾ1 ರಿಂದ 4 ಮತ್ತು 6 ರವರು ಗೊತ್ತು, ಅವರು ನಮ್ಮ ಗ್ರಾಮದವರು. ಆರೋಪಿತರು ಗೊತ್ತು. ಅವರು ಸಹ ನಮ್ಮ ಗ್ರಾಮದವರು. ನಮ್ಮ ಮನೆಯಿಂದ 2 ನೇ ಮನೆ ಚಾಸಾ1 ರವರ ಮನೆ ಇರುತ್ತದೆ. ನಮ್ಮ ಮನೆಯ ಪಕ್ಕ ಆರೋಪಿತರ ಮನೆ ಇರುತ್ತದೆ.

ಆರೋಪಿತರು ಮತ್ತು ಚಾಸಾ1 ಮತ್ತು 2 ರವರ ನಡುವೆ ಬೇಲಿ ವಿಚಾರದಲ್ಲಿ ತಕರಾರು ಇರುತ್ತದೆ. ದಿನಾಂಕಃ 06-03-2022 ರಂದು ಸಂಜೆ 5-00 ಗಂಟೆಗೆ ನಾನು ನಮ್ಮ ಮನೆಯ ಹತ್ತಿರ ಟ್ರ್ಯಾಕ್ಟರ್ ನಿಂದ ಕಟ್ಟಿಗೆಯನ್ನು ಇಳಿಸುತ್ತಿದ್ದೆ , ಆಗ ಚಾಸಾ4 ರವರು ಸಹ ನಮ್ಮ ಮನೆ ಹತ್ತಿರ ಇದ್ದರು. ನಾನು ಮತ್ತು ಚಾಸಾ4 ರವರು ಮಾತನಾಡುತ್ತಾ

ನಿಂತಿದ್ದೆವು. ಆಗ 1 ನೇ ಆರೋಪಿ ಚಾಸಾ1 ರವರು ಜಗಳ ಆಡುವ ಶಬ್ದ ಕೇಳಿ ಬಂತು. ಆಗ ನಾನು ಆರೋಪಿತರು ಮತ್ತು ಚಾಸಾ1 ರವರು ಚೆನ್ನಾಗಿ ಇದ್ದರು, ಯಾವುದೋ ವಿಚಾರಕ್ಕೆ ಮಾತನಾಡಿಕೊಳ್ಳುತ್ತಿರಬಹುದು ಎಂದು ನಾನು ಸುಮ್ಮನಾದೆ. ಚಾಸ4 ರವರು ಜೋರಾಗಿ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ತಮ್ಮ ಮನೆಯ ಹತ್ತಿರ ಹೋದರು. ನಾನೂ ಕೂಡ ಅಲ್ಲಿಗೆ ಹೋದೆ. ಚಾಸಾ2 ರವರ ಮನೆಯ ಹಿಂಬದಿಯಲ್ಲಿ ಚಾಸಾ3 ರವರು ಸಗಣಿ ಸಾರಿಸುತ್ತಿದ್ದರು. ಆ ವಿಚಾರದಲ್ಲಿ 1 ನೇ ಆರೋಪಿ ಅಲ್ಲಿಗೆ ಬಂದು ಚಾಸಾ3 ರವರಿಗೆ ಯಾಕೆ ಇಲ್ಲಿ ಸಗಣಿ ಸಾರಿಸುತ್ತಿದ್ದೀರಾ ಎಂದು ಹೇಳಿ ಕೆಟ್ಟ ಪದಗಳಿಂದ ಬೈದಿರುತ್ತಾನೆ. ಆಗ ಚಾಸಾ1 ರವರು ಮನೆಯಿಂದ ಹೊರಗಡೆ ಬಂದು 1 ನೇ ಆರೋಪಿಗೆ ಯಾಕೆ ನನ್ನ ತಾಯಿಗೆ ಬೈಯ್ಯುತ್ತಿದ್ದೀಯಾ ಎಂದು ಕೇಳಿರುತ್ತಾನೆ. ಆಗ 1 ನೇ ಆರೋಪಿ ಚಾಸಾ1 ರವರಿಗೆ ನೀನು ಯಾವನೋ ಕೇಳುವುದಕ್ಕೆ ಬೋಳಿ ಮಗನೇ ಎಂದು ಬೈದಿರುತ್ತಾನೆ. ಆಗ ಇಬ್ಬರೂ ಕುಸ್ತಿ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ2 ರವರು ಜಗಳ ಬಿಡಿಸಲು ಬಂದಿರುತ್ತಾರೆ. ಸ್ಥಳಕ್ಕೆ 2 ನೇ ಆರೋಪಿ ಬಂದು ಚಾಸಾ2 ರವರಿಗೆ ಹೊಡೆದರು, ಚಾಸಾ2 ರವರು ಸಹ 2 ನೇ ಆರೋಪಿಗೆ ಹೊಡೆದಿರುತ್ತಾರೆ. ನಂತರ 1 ನೇ ಆರೋಪಿ ಕತ್ತಿ ತೆಗೆದುಕೊಂಡು ಚಾಸಾ1 ಮಾಲತೇಶನ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾನೆ. ಚಾಸಾ1 ರವರಿಗೆ ತೀವ್ರ ಸ್ವರೂಪದ ರಕ್ತಗಾಯವಾಯಿತು. ಚಾಸಾ2 ರವರುಬಿಡಿಸಲು ಬಂದಾಗ ಅವರಿಗೂ ಸಹ 1 ನೇ ಆರೋಪಿ ಕತ್ತಿಯಿಂದ ಕುತ್ತಿಗೆಯ ಎಡಭಾಗಕ್ಕೆ ಮತ್ತು ಎಡಭುಜಕ್ಕೆ ಹೊಡೆದಿರುತ್ತಾನೆ. ಚಾಸಾ2 ರವರಿಗೂ ಸಹ ತೀವ್ರವಾದ ರಕ್ತಗಾಯವಾಗಿ ರಕ್ತಸ್ರಾವವಾಯಿತು. ಆಗ ನಾವುಗಳು ಜಗಳವನ್ನು ಬಿಡಿಸಿದೆವು. ನಾನು, ಚಾಸಾ4, ಚಾಸಾ6, ಚಾಸ 1 ಮತ್ತು 2 ರವರನ್ನು ವಾಹನದಲ್ಲಿ ಸೊರಬ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಗಲಾಟೆ ಯನ್ನು ಬಿಡಿಸಿದ ಮೇಲೆ 1 ನೇ ಆರೋಪಿ ಕತ್ತಿಯನ್ನು ಸ್ಥಳದಲ್ಲೆ ಬಿಸಾಡಿ ಚಾಸಾ1 ಮತ್ತು 2 ರವರಿಗೆ ನೀವು ಇವತ್ತು ಬದುಕಿಕೊಂಡಿದ್ದೀರಾ ಮತ್ತೆ ಸಿಕ್ಕರೆ ನಿಮ್ಮನ್ನು ಬಿಡುವುದಿಲ್ಲ ಎಂದು ಹೇಳಿರುತ್ತಾನೆ.

1 ನೇ ಆರೋಪಿ ಚಾಸಾ1 ಮತ್ತು 2 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಕತ್ತಿಯನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಈಗ ನೋಡುತ್ತಿದ್ದು ಕತ್ತಿಯನ್ನು ಈಗಾಗಲೇ ಮು ಮಾ 4 ಎಂದು ಗುರುತಿಸಲಾಗಿದೆ. 1 ನೇ ಆರೋಪಿ ಚಾಸಾ1 ಮತ್ತು 2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕತ್ತಿಯಿಂದ ಹಲ್ಲೆ ಮಾಡಿರುತ್ತಾನೆ. ಆ ದಿವಸ ಗಲಾಟೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿತರು ಈ ದಿವಸ ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ವಿಚಾರವನ್ನು ನಾನು ಪೋಲೀಸರ ಮುಂದೆ ಹೇಳಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ</u>**

ಊರಿನವರಿಗೆ ಓಡಾಡಲು ನಮ್ಮ ಮನೆಯ ಹಿಂದೆ ಜಾಗ ಬೇಕು ಎಂದು ಊರಿನವರು ಕೇಳಿ ನಮ್ಮ ಮನೆಯ ಹಿಂದೆ ಇರುವ 10 ಅಡಿ ಜಾಗವನ್ನು ಬಿಡಿಸಿ ಕೊಟ್ಟಿದ್ದರು ಎಂದರೆ ಸರಿ. ಆಗ ನಾನು ಊರಿನವರಿಗೆ ಆರೋಪಿತರ ಹತ್ತಿರ ಜಾಸ್ತಿ ಜಾಗ ಇರುತ್ತದೆ ಅದರಲ್ಲಿ ಸ್ವಲ್ಪ ಜಾಗವನ್ನು ನನಗೆ ಬಿಡಿಸಿಕೊಡಿ ಎಂದು ಊರಿನವರಿಗೆಕೇಳಿಕೊಂಡಿದ್ದೆ ಎಂದರೆ ಸರಿ. ಊರಿನವರು ಆರೋಪಿತರನ್ನು ನನಗೆ ಸ್ವಲ್ಪ ಜಾಗ ಬಿಟ್ಟುಕೊಡಿ ಎಂದು ಕೇಳಿದ್ದಕ್ಕೆ ಅವರು ಒಪ್ಪಲಿಲ್ಲ ಎಂದರೆ ಸರಿ. ಆರೋಪಿತರು ನನಗೆ ಜಾಗ ಕೊಡಲು ನಿರಾಕರಿಸಿದ್ದಕ್ಕೆ ನಾನು ಅವರ ಜೊತೆ ಮಾತನ್ನು ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಆ ದಿವಸ ಸ್ಥಳಕ್ಕೆ ಸುಮಾರು 10–15 ಜನ ಊರಿನವರು ಬಂದಿದ್ದರು. ನಾವುಗಳು ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತೇವೆ ಎಂದರೆ ಸರಿ. ನಾನು ಆ ದಿವಸ ಕಾಡಿನಲ್ಲಿ

ಕಡಿದ ಕಟ್ಟಿಗೆಯನ್ನು ಟ್ರಾಕ್ಟರ್ ನಲ್ಲಿ ತಂದು ಮನೆಯ ಹತ್ತಿರ ಇಳಿಸುತ್ತಿದ್ದೆ ಎಂದರೆ ಸರಿ. ನಾನು ಕಟ್ಟಿಗೆ ಇಳಿಸಿದ ಸ್ಥಳದಿಂದ ಘಟನೆ ನಡೆಯಿತು ಎಂದು ಹೇಳಲಾದ ಸ್ಥಳ ಕಾಣುವುದಿಲ್ಲ ಎಂದರೆ ಸಾಕ್ಷಿ ಕಾಣುತ್ತದೆ ಎಂದು ಹೇಳುತ್ತಾರೆ.

ಈ ಘಟನೆ ಸಂಬಂಧ ನಾನು ಆನವಟ್ಟಿ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿ. ಪೋಲೀಸರು ನಮ್ಮ ಊರಿಗೆ ಬಂದು ನನ್ನ ಹೇಳಿಕೆ ತೆಗೆದುಕೊಂಡಿಲ್ಲ. ಚಾಸಾ1 ರಿಂದ 4 ನನಗೆ ಚೆನ್ನಾಗಿ ಪರಿಚಯ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).